# ಒಂದು ಪತ್ರ


ಆತ್ಮೀಯ ಸಂಪಾದಕರೆ,

'ಅಪ್ಪನೊಂದಿಗೆ ಮುಖಾಮುಖಿ' ಅನ್ನುವ ನನ್ನ ಆತ್ಮಕಥನದ ಒಂದು ಅಧ್ಯಾಯವನ್ನು ಮೇ ತಿಂಗಳ ಆರನೆಯ ತಾರೀಖಿನ 'ಸುಧಾ'ದಲ್ಲಿ ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು.

1965ನೇ ಇಸವಿ ಇರಬೇಕು. ನಾನಾಗ ಮೈಸೂರಿನಲ್ಲಿ ಪಿಯುಸಿ ಓದುತ್ತಿದ್ದೆ. ಮೆಟ್ರೋಪೋಲ್ ಹೋಟೆಲ್ ಹಿಂಭಾಗದಲ್ಲಿದ್ದ ಹರಿಜನ ಉಚಿತ ಹಾಸ್ಟೆಲ್‌ನಲ್ಲಿ ನನ್ನ ವಾಸ. ಹೊಸದಾಗಿ ಬಂದಿದ್ದ 'ಸುಧಾ'ವನ್ನು ಮಾರಿಕೊಂಡು ಹಾಸ್ಟೆಲ್‌ಗೇ ಒಬ್ಬ ಹುಡುಗ ಬಂದಿದ್ದ. ಅದರ ಬೆಲೆ ನಲವತ್ತು ಪೈಸೆ! ಅದರ ಮುಖಪುಟದ ನೋಟಕ್ಕೆ ಮನಸೋತು ಅದನ್ನು ಕೊಂಡಿದ್ದೆ. ಮೊದಲನೇ ಪುಟದಿಂದ ಹಿಡಿದು ಕೊನೆಯ ಪುಟದವರೆಗೂ ಒಂದಕ್ಷರ ಬಿಡದಂತೆ ಓದಿದ್ದೆ. ಅಂದಿನಿಂದ 'ಸುಧಾ'ದೊಂದಿಗೆ ನನ್ನ ನಂಟು.

ಎರಡು ವರ್ಷದ ಬಳಿಕ– ಪಿಯುಸಿಯಲ್ಲಿ ಫೇಲ್ ಆಗಿ, ನನ್ನ ಊರಾದ ಮಂಡ್ಯದಲ್ಲಿದ್ದೆ. ಆಗ ನನಗೆ ಗೊತ್ತಿದ್ದ ಮಟ್ಟಿಗೆ ಮಂಡ್ಯದಲ್ಲಿ ಒಂದೇ ಒಂದು ಅಂಗಡಿಯಲ್ಲಿ 'ಸುಧಾ' ಮಾರಾಟವಾಗುತ್ತಿತ್ತು.

ಅಂದೊಂದು ದಿನ, 'ಸುಧಾ' ಬರುವಿಕೆಗಾಗಿ ಕಾದು ಕುಳಿತಿದ್ದೆ. ಕಾರಣ– ಕೆಲವು ದಿನಗಳ ಹಿಂದೆ ನಾನೊಂದು ಕತೆ ಬರೆದು ಪ್ರಕಟಣೆಗಾಗಿ 'ಸುಧಾ'ಕ್ಕೆ ಕಳುಹಿಸಿದ್ದೆ. ಅದು ಪ್ರಕಟವಾಗಿರುತ್ತೆ ಎನ್ನುವ ಹುಚ್ಚು ವಿಶ್ವಾಸ ನನಗೆ. ವಾರದ ಆ ದಿನಕ್ಕಾಗಿ ಹಗಲಿರುಳೂ ಕಾದು, ನಮ್ಮ ಮನೆಗೆ ಸಾಕಷ್ಟು ದೂರದಲ್ಲಿದ್ದ ಆ ಅಂಗಡಿಗೆ ಹೋಗಿ, ಮುಂದೆ ಇಳಿಬಿಟ್ಟ ಸುತ್ತಲಿ ದಾರಕ್ಕೆ ಕ್ಲಿಪ್‌ಗಳನ್ನು ಹಾಕಿ ಒಂದರ ಕೆಳಗೊಂದು ನೇತು ಹಾಕಿದ್ದ 'ಸುಧಾ' ಸಂಚಿಕೆಗಳನ್ನು ನೋಡಿದಾಗ ಮನಸ್ಸು ಹಿಗ್ಗಿ ನಲಿದಿತ್ತು! ಅದರ ಬೆಲೆಯಾದ ನಲವತ್ತು ಪೈಸೆಯನ್ನು ಹೇಗೋ ಕಷ್ಟಪಟ್ಟು ಮಾಡಿಕೊಂಡು ಜೇಬಿನಲ್ಲಿ ಇಟ್ಟುಕೊಂಡಿದ್ದೆ. ನನ್ನ ಕತೆ ಪ್ರಕಟವಾಗಿದ್ದರೆ ಕೊಳ್ಳೋಣ, ಇಲ್ಲದಿದ್ದರೆ ಮುಂದಿನ ವಾರಕ್ಕೆ ಆ ಹಣವನ್ನು ಇಟ್ಟುಕೊಳ್ಳುವ ಎಂದು ಮೊದಲೇ ನಿರ್ಧರಿಸಿಕೊಂಡಿದ್ದೆ. ರೌಡಿ ಥರ ಇದ್ದ ಅಂಗಡಿಯವನ ಕಣ್ತಪ್ಪಿಸಿ, ಹೊರಗೆ ನೇತು ಹಾಕಿದ 'ಸುಧಾ' ಪತ್ರಿಕೆಯ ಪುಟಗಳನ್ನು ಕಳ್ಳತನದಿಂದ 'ನನ್ನ ಕತೆ ಬಂದಿದೆಯಾ..' ಅನ್ನುವ ಕನಸಿನ ಸಂಭ್ರಮದಲ್ಲಿ ನಡುಗುವ ಕೈಗಳಿಂದ ತಿರುವಿ ತಿರುವಿ ನೋಡಿ ನಿರಾಶನಾಗಿದ್ದೆ.



'ಮುಂದಿನ ವಾರ ಖಂಡಿತ ಅಚ್ಚಾಗಿರುತ್ತೆ' ಅಂತ ನನ್ನನ್ನೇ ನಾನು ಸಂತೈಸಿಕೊಳ್ಳುತ್ತಾ ಮತ್ತೆ ಏಳು ದಿನಗಳ ಅಸಹನೀಯ ಕಾಯುವಿಕೆಗೆ ತೊಡಗಿಸಿಕೊಂಡೆ. ಮರುವಾರವೂ ಅದೇ ರೀತಿ ಅಂಗಡಿಗೆ ಹೋಗಿ ಪುಟಗಳನ್ನು ತಿರುವಿ ಹಾಕುತ್ತಿರುವಾಗ ರಪ್ಪನೆ ನನ್ನ ತಲೆಯ ಮೇಲೆ ಒಂದು ಜೋರು ಏಟು ಬಿತ್ತು. 'ನಿನಗೆ ಹೋದ್ಸಲವೇ ಹೊಡೀಬೇಕು ಅಂತಿದ್ದೆ ಕಣಲೇ. ಕಾಸಿದ್ದರೆ ತಕ್ಕಂಡ್ ಓದು. ನಿಂತ್ಕಂಡೇ ಓದ್ಬಿಡವಾ ಅಂತ ಈ ಬಿಟ್ಟಿ ಶೋಕಿ ಯಾಕ್ಲಾ ನಿಂಗೆ ಬಡ್ಡೆತ್ತದೇ?' ಅಂತ ಹೊಡೆತದ ಜತೆಗೆ ಕೆಂಡವನ್ನೂ ಕಾರಿದ ಅಂಗಡಿಯವ. ಹೊಡೆತ ತಿಂದು ನೋವಾದ ತಲೆಯನ್ನು ಉಜ್ಜಿಕೊಳ್ಳುತ್ತಾ, 'ಸುಧಾ–ಕ್ಕೆ ನನ್ನ ಕತೆ ಕಳ್ಸಿದ್ದೆ. ಬಂದಿದ್ರೆ ತಕೊಳ್ಳುವಾ ಅಂತ ನೋಡ್ದೆ' ಅಂದೆ. ಅದಕ್ಕವನು 'ನೋಡೋಕೆ ಬಸ್‌ಸ್ಟಾಂಡ್ನಲ್ಲಿ ಕೂಲಿ ಕೆಲ್ಸ ಮಾಡೋವ್ನಂಗಿದ್ದೀಯಾ. ನೀನು ಕತೆ ಬೇರೆ ಬರೀತೀಯೇನ್ಲಾ. ಇನ್ನೊಂದಪ ಇತ್ಲಾ ಕಡೀಕೆ ಬಂದ್ರೆ ವದೆ ತಿಂತೀಯಾ ನನ್ಮಗ್ನೆ. ರೈಟ್ ಹೇಳು' ಅಂತ ಬೈದು ಅಟ್ಟಿದಾಗ ನನ್ನ ಕಣ್ಣಲ್ಲಿ ನೀರು ತುಂಬಿಕೊಂಡಿತ್ತು.

ಮುಂದಿನ ದಿನಗಳಲ್ಲಿ ತಿನ್ನುವ ಆಸೆಗೆ ಕಡಿವಾಣ ಹಾಕಿ, ವಾರಕ್ಕೆ ನಲವತ್ತು ಪೈಸೆಯಷ್ಟನ್ನು ಉಳಿಸಿ, ಮುಂದಿನ ನಾಲ್ಕೈದು ವಾರದವರೆಗೂ ಕೊಂಡ 'ಸುಧಾ'ದಲ್ಲಿ ನನ್ನ ಕತೆ ಬಂದಿಲ್ಲದಿರುವದನ್ನು ತಿಳಿದು ದುಃಖಿತಪ್ತನಾಗುತ್ತಿದ್ದೆ. 'ಸುಧಾ'ದಲ್ಲಿ ನನ್ನ ಕತೆ ಪ್ರಕಟವಾಗುವುದು ಇಲ್ಲಿಯ ತನಕ ಕನಸಾಗಿಯೇ ಉಳಿದುಬಿಟ್ಟಿತ್ತು.

ನಲವತ್ತೈದು ವರ್ಷಗಳ ಬಳಿಕ ಮೊದಲ ಬಾರಿಗೆ, 'ಸುಧಾ'ದಲ್ಲಿ ನನ್ನ ಲೇಖನವನ್ನು ಮೊಟ್ಟಮೊದಲಿಗೆ ನೋಡಿದಾಗ ನನ್ನ ಕಂಗಳಲ್ಲಿ ನೀರು ತುಂಬಿ ಕೊಂಡಿತ್ತು. ಅಂದು ನಿರಾಶನಾಗಿ ಕಂಬನಿ ಮಿಡಿದಿದ್ದರೆ, ಇಂದು ಆನಂದದ ಭಾಷ್ಪಗಳನ್ನು ಸುರಿಸಿದ್ದೆ. ಅರವತ್ತೊಂದು ವರ್ಷ ವಯಸ್ಸಿನ ನನಗೆ ಜೀವನದಲ್ಲಿ ನನ್ನ ನೆಚ್ಚಿನ 'ಸುಧಾ'ದಲ್ಲಿ ನನ್ನದೊಂದು ಕತೆ ಪ್ರಕಟವಾಗುತ್ತಿರುವ ಸಂತಸ ನಲವತ್ತೈದು ವರ್ಷಗಳ ಹಿಂದೆ ನಾನು ಬಾಲಕನಿದ್ದಾಗಿನ ನಿರೀಕ್ಷೆ, ಉತ್ಸಾಹಕ್ಕಿಂತ ಯಾವ ರೀತಿಯಲ್ಲೂ ಕಡಿಮೆ ಇರಲಿಲ್ಲ.


ಮನೆಯ ಹತ್ತಿರದ ಅಂಗಡಿಯ ಮುಂದೆ ಮ್ಯಾಗಜೈನ್ ಮಾರುವ ಮುದುಕಿ ಇನ್ನೂ ಬರುವ ಮೊದಲೇ ನಾನು ಅವಳಿಗಾಗಿ ಕಾಯುತ್ತಾ ನಿಂತಿದ್ದೆ. 'ಸುಧಾ ಬಂದಿದೆಯಾ?' ಅಂತ ಕೇಳಿದಾಗ, ಅವಳು 'ಹೂಂ' ಅಂದಾಗಲೇ ಏನೋ ಒಂದು ರೀತಿಯ ಆವೇಶ. ಆತುರಾತುರದಿಂದ ಪುಟ ತಿರುವಿ ನೋಡಿದಾಗ– ನನ್ನ ಕತೆ ಇತ್ತು! ಎದೆಯಲ್ಲಿ ಇದ್ದ ಬಿಗಿತ ಸಡಿಲಗೊಂಡಿತ್ತು. ಎಷ್ಟು ಬಚ್ಚಿಟ್ಟುಕೊಂಡರೂ ಉಕ್ಕುತ್ತಿದ್ದ ಮಂದಹಾಸ ಹೊರಗೆ ಚೆಲ್ಲುತ್ತಿತ್ತು. 'ಇದರ ಜತೆಗೆ ಇನ್ನೂ ನಾಲ್ಕು ಕೊಡಮ್ಮ' ಅಂತ ಅವಳಿಗೆ ಅರವತ್ತು ರೂಪಾಯಿ ಕೊಟ್ಟಾಗ ಆಶ್ಚರ್ಯದಿಂದ ನನ್ನ ಮುಖವನ್ನೇ ನೋಡಿದಳು. 'ಇದರಲ್ಲಿ ನನ್ನ ಕತೆ ಬಂದಿದೆ' ಅನ್ನುತ್ತಾ ಜಂಬದಿಂದ ಅವಳಿಗೆ ಅದನ್ನು ತೋರಿಸಿದೆ. 'ನೀವು ಬರ್ದಿದ್ದಾ ಸಾರ್' ಅಂತ ಅವಳು ನನ್ನನ್ನು ಅಚ್ಚರಿಯಿಂದ ನೋಡಿದಾಗ, ಆನಂದದ ಮಡುವಲ್ಲಿ ಮೀಯುತ್ತಿದ್ದ ನನ್ನ ಕಂಗಳೇ ಉತ್ತರ ಹೇಳಿದ್ದವು.

ನಾನು ಮತ್ತೆ ಹದಿನಾರು ವರ್ಷದ ಮಂಡ್ಯದ ಅದೇ ಹಳೆಯ ಕೊಳಕು ಹುಡುಗನಾಗಿಬಿಟ್ಟಿದ್ದೆ. ನನ್ನೊಳಗೆ ಇನ್ನೂ ಇದ್ದ ಆ ಹುಡುಗ ಇಂದು ಕುಣಿದು ಕುಪ್ಪಳಿಸಿದ್ದ.

'ಇದಕ್ಯಾಕಿಷ್ಟು ಆವೇಶ..? ನಿಮ್ಮ ಲೇಖನದಲ್ಲಿ ಆ ಯೋಗ್ಯತೆ ಇತ್ತು, ಪ್ರಕಟಿಸಿದ್ದೇವೆ' ಅಂತ ನೀವು ಹೇಳಬಹುದು, ನಿಜ. ಆದರೆ ಅಂತಹ ಯೋಗ್ಯತೆ ಅದರಲ್ಲಿ ಇದೆ ಅಂತ ನೀವು ಅದನ್ನು ತೋರಿಸಿದ್ದೀರಿ.

ಗುರುವಾರದಿಂದ ನನಗೆ 'ಸುಧಾ' ಓದುಗರಿಂದ ಅಭಿನಂದನೆಗಳ ಮಹಾಪೂರವೇ ಹರಿದುಬರುತ್ತಿದೆ, ನನ್ನ ಮೊಬೈಲ್ ನಿರಂತರ ರಿಂಗ್ ಆಗುತ್ತಲೇ ಇದೆ. ಅಭಿಮಾನದ ಮಾತುಗಳು, ತಪ್ಪಿದರೆ ಎಸ್‌ಎಮ್‌ಎಸ್‌ಗಳು. ಪುಸ್ತಕಕ್ಕಾಗಿ ಬೇಡಿಕೆಗಳು. ನನ್ನಲ್ಲಿ ಉಳಿದಿದ್ದ ಸುಮಾರು ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಅಂಚೆಯಲ್ಲಿ ಕೇಳಿದವರೆಲ್ಲರಿಗೂ ಕಳುಹಿಸಿಕೊಟ್ಟೆ. ಕಾಸರಗೋಡು, ಸವಣೂರು ತಾಲ್ಲೂಕಿನ ಕುರುಬರ ಮಲ್ಲೂರು, ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ.. ಎಲ್ಲೆಲ್ಲಿಲ್ಲ ಹೇಳಿ ನಮ್ಮ 'ಸುಧಾ' ಓದುಗರು!

ತಮ್ಮ ವಿಶ್ವಾಸಿ,
ಎಂ.ಎಸ್.ಪರಶಿವಮೂರ್ತಿ

ನಿಜವಾದ ಪುರುಷ
ನಾಗುವುದರ ರಹಸ್ಯ!

ಶಾರೀರಿಕ ನಿಶ್ಯಕ್ತಿ
ಸಪ್ತಧಾತುಗಳ ಕೊರತೆ?
ಇಂದ್ರಿಯದ ಶಿಥಿಲತೆ?
ಉತ್ಸಾಹ, ಸ್ಫೂರ್ತಿ ಮತ್ತು ಸಾಮರ್ಥ್ಯಕ್ಕಾಗಿ


ಪ್ರತಿದಿನ ಮಾಲೀಸು ಮಾಡುವುದರಿಂದ ಪುರುಷರ ದುರ್ಬಲ ನರಗಳಲ್ಲಿ ಶಕ್ತಿ ಮತ್ತು ಉಲ್ಲಾಸ ಹೆಚ್ಚಿಸುವುದು.
ಆಯುರ್ವೇದಿಕ್
stay-on
ಪವರ್ ತೈಲ
ಪ್ರಮುಖ ಮೆಡಿಕಲ್ ಮತ್ತು ಆಯುರ್ವೇದೀಯ ಅಂಗಡಿಗಳಲ್ಲಿ ಲಭ್ಯ
ಗಣನೀಯವಾದ ಮತ್ತು ಒಳ್ಳೆಯ ಪರಿಣಾಮಕ್ಕಾಗಿ 'ಸ್ಟೇ-ಆನ್' ತೈಲದೊಂದಿಗೆ ಪ್ರತಿ ದಿನ 'ಸ್ಟೇ-ಆನ್' ಕ್ಯಾಪ್ಸೂಲನ್ನೂ ಬಳಸಿ